ರಕ್ಷಣೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಅವರನ್ನು ಕಳುಹಿಸಿಕೊಡುತ್ತಾನೆ. ಆಗ ಸೀತೆ ರಾಮನಿಗೆ ಹೀಗೆ ಹೇಳುತ್ತಾಳೆ:

**ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಮ್।**
**ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥**

(*ಅರಣ್ಯಕಾಂಡ*, ೯.೩೦)

"ಧರ್ಮದಿಂದ ಅರ್ಥವು ಹುಟ್ಟುತ್ತದೆ. ಧರ್ಮದಿಂದಲೇ ಸುಖವೂ ಉಂಟಾಗುತ್ತದೆ. ಧರ್ಮದಿಂದಲೇ ಸರ್ವವೂ ಒದಗಿಬರುತ್ತದೆ. ಜಗತ್ತಿನ ಸತ್ವವು ಧರ್ಮವೇ ಆಗಿದೆ."

ಹೀಗೆ ಸೀತೆಯು ಜೀವನದಲ್ಲಿ ಧರ್ಮದ ಸ್ಥಾನವೇನೆಂಬುದನ್ನು ರಾಮನಿಗೆ ತಿಳಿಸುತ್ತಾಳೆ. ಯಾವ ರೀತಿಯಿಂದಲೂ ನಮಗೆ ಅಪಕಾರ ಮಾಡಿಲ್ಲದೆ, ರಾಕ್ಷಸರನ್ನು ಹಿಂಸಿಸುವುದು ನ್ಯಾಯವಲ್ಲ, ಧರ್ಮವಲ್ಲ. ಅಷ್ಟೇ ಅಲ್ಲ, ಋಷಿವೇಷ ಧರಿಸಿ ಅದಕ್ಕೆ ವಿರುದ್ಧವಾಗಿ ಆಯುಧಗಳನ್ನು ಹಿಡಿಯುವುದೂ ಅಪರಾಧವೇ ಎಂದು ಅವಳು ಪ್ರತಿಪಾದನೆ ಮಾಡುತ್ತಾಳೆ. ತನ್ನ ಮಾತನ್ನು ದೃಢಪಡಿಸಲು ದೀರ್ಘಕಾಲ ತಪಸ್ಸನ್ನಾಚರಿಸಿ, ಆಕಸ್ಮಿಕವಾಗಿ ದೊರೆತ ಖಡ್ಗದ ಸಹವಾಸದಿಂದ ಸಂಹಾರಕನಾಗಿ ಪರಿವರ್ತಿತನಾದ ಒಬ್ಬ ಋಷಿಯ ಚರಿತೆಯನ್ನು ಆಕೆ ತಿಳಿಸುತ್ತಾಳೆ. **'ಅಗ್ನಿಸಂಯೋಗವದ್ಧೇತುಃ ಶಸ್ತ್ರಸಂಯೋಗ ಉಚ್ಯತೇ'** – ಬೆಂಕಿಯ ಸಹವಾಸದಂತೆ ಇರುವ ಈ ಆಯುಧಗಳನ್ನು ತ್ಯಜಿಸಬೇಕೆಂದು ರಾಮನಲ್ಲಿ ಸೀತೆ ವಿನಯಪೂರ್ವಕವಾಗಿ ವಿನಂತಿಸಿಕೊಳ್ಳುತ್ತಾಳೆ.

ರಾವಣ ಸೀತೆಯನ್ನು ಕದ್ದೊಯ್ಯಲು ಬಂದಾಗ, ಮಾವ ಮಾರೀಚನ ಸಹಾಯವನ್ನು ಕೇಳುತ್ತಾನೆ. ಆಗ ಅವನಾಡಿದ ನೀತಿಯ ಮಾತುಗಳು ಪ್ರಸಿದ್ಧವಾದುವು: "ಸದಾ ಪ್ರಿಯವಾದ ಮಾತನ್ನೇ ಆಡುವ ಜನರು ಸುಲಭವಾಗಿ ಸಿಗುತ್ತಾರೆ, ಆದರೆ ಅಪ್ರಿಯವೂ, ಪಥ್ಯವೂ ಆದುದನ್ನು ರಾಜನಿಗೆ ಹೇಳಲು ಜನ ಹಿಂಜರಿಯುತ್ತಾರೆ."

ಸೀತೆಯನ್ನು ರಾವಣನು ಒಯ್ಯುತ್ತಿರುವಾಗ ಜಟಾಯು ಅವನನ್ನು ತಡೆದು ನಿಲ್ಲಿಸಿ, ಅನೇಕ ನೀತಿಯ ಮಾತುಗಳನ್ನು ಹೇಳುತ್ತಾನೆ: **'ಧರ್ಮಃ ಶುಭಂ ವಾ ಪಾಪಂ ವಾ ರಾಜಮೂಲಂ ಪ್ರವರ್ತತೇ'** – ಲೋಕದಲ್ಲಿ ಧರ್ಮವಾಗಲಿ, ಶುಭವಾಗಲಿ, ಪಾಪವಾಗಲಿ, ಅದು ರಾಜನ ಕಾರಣದಿಂದಲೇ ಆಗುತ್ತದೆ."
**ಯತ್ಕೃತ್ವಾ ನ ಭವೇದ್ಧರ್ಮೋ ನ ಕೀರ್ತಿರ್ನ ಯಶೋ ಭುವಿ। ಶರೀರಸ್ಯ ಭವೇತ್ ಖೇದಃ ಕಸ್ತತ್ಕರ್ಮ ಸಮಾಚರೇತ್ ॥** (*ಅರಣ್ಯಕಾಂಡ*, ೫೦.೯) – ಯಾವುದರಿಂದ ಧರ್ಮವೂ ಕೀರ್ತಿಯೂ ಯಶಸ್ಸೂ ಲಭಿಸುವುದೋ ಅಂತಹ ಕೆಲಸವನ್ನು ಮಾತ್ರ ಮಾಡಬೇಕು. ಈ ಯಾವ ಪ್ರಯೋಜನವೂ ದೊರಕದ ಕೆಲಸವು ಶರೀರಕ್ಕೆ ಕೇವಲ ಆಯಾಸಕರ ಅಷ್ಟೆ. ಆದುದರಿಂದ ನೀನು ಮಾಡುತ್ತಿರುವ ಈ ಅಮಂಗಳಕರವಾದ ಕೆಲಸವನ್ನು ಬಿಟ್ಟುಬಿಡು." ರಾವಣ ಜಟಾಯುವಿನ ಮಾತನ್ನು ಕೇಳುವುದಿಲ್ಲ. ಆಗ ಜಟಾಯುವು ದಶರಥನ ಮೇಲಿದ್ದ ಸ್ನೇಹದ ಭಾವನೆಯಿಂದ, ಸೀತೆ ತನ್ನ ಸೊಸೆ ಎಂಬಂತೆ ನಿಷ್ಠೆಯಿಂದ ರಾವಣನೊಡನೆ ಹೋರಾಡಿ ವೀರಮರಣ ಹೊಂದುತ್ತಾನೆ.

ರಾವಣನಿಗೆ ಅನೇಕರು ಹಲವಾರು ರೀತಿಯಲ್ಲಿ ಧರ್ಮವನ್ನು ಹೀಗೆ ತಿಳಿಹೇಳುತ್ತಾರೆ: "ನ್ಯಾಯಮಾರ್ಗದಿಂದ ಕೆಲಸ ಮಾಡಿದ ರಾಜ ಎಂದೆಂದಿಗೂ ಪಶ್ಚಾತ್ತಾಪ ಪಡುವುದಿಲ್ಲ. ಆದುದರಿಂದ ನೀನು ಮಾಡುವ ಕೆಲಸ ನ್ಯಾಯಸಮ್ಮತವಾಗಿರಬೇಕು. ಹಿಂದೆ ಇಂದ್ರಿಯಗಳನ್ನು ಗೆದ್ದು ಮೂರೂ ಲೋಕಗಳನ್ನು ಗೆದ್ದೆ, ಕೈಲಾಸವನ್ನೇ ಅಲುಗಾಡಿಸಿದೆ, ಶಿವನ ಆತ್ಮಲಿಂಗವನ್ನು ಪಡೆದುಕೊಂಡೆ. ಆದರೆ ಅದೇ ಇಂದ್ರಿಯಗಳಿಗೆ ವಶನಾಗಿ ನೀನು ನಾಶವಾಗುವುದಷ್ಟೇ ಅಲ್ಲದೆ, ಇಡೀ ರಾಕ್ಷಸಕುಲವನ್ನೇ ನಾಶಮಾಡುತ್ತಿರುವೆ" ಎಂದು ರಾವಣನ ಪತ್ನಿ ಮಂಡೋದರಿ ಬುದ್ಧಿವಾದ ಹೇಳುತ್ತಾಳೆ. ಕುಂಭಕರ್ಣನು ರಾಜನಿಗೆ ಅತ್ಯಂತ ಅಗತ್ಯವಾದ ಮಂತ್ರಾಲೋಚನೆಯನ್ನು ಕುರಿತು ಈ ರೀತಿ ಬೆಳಕು ಬೀರುತ್ತಾನೆ: "ಸ್ತುತಿಪಾಠಕರನ್ನು, ಸದಾ ಎಲ್ಲದಕ್ಕೂ ಭಲೇ! ಉಘೇ! ಅನ್ನುವವರನ್ನು ಮಂತ್ರಿಗಳನ್ನಾಗಿ ಮಾಡಿಕೊಂಡಿರುವೆ. ಆದುದರಿಂದ ನಿನ್ನ ಮಂತ್ರಾಲೋಚನೆ ದೋಷಪೂರ್ಣವಾಗಿದೆ. ಅದು ನಿನ್ನೊಡನೆ ಲಂಕೆಯ ನಾಶಕ್ಕೂ ಕಾರಣವಾಗಿದೆ" (*ಯುದ್ಧಕಾಂಡ*. ೬೩.೧೨).

ಶಾಶ್ವತ ಧರ್ಮದಲ್ಲಿ ನಿಷ್ಠೆ ಹೊಂದಿದ್ದ ವಿಭೀಷಣನು ತನ್ನ ಅಣ್ಣನಾದ ರಾವಣನ ದುರಾಲೋಚನೆಯ ವಿಷಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧನಿರಲಿಲ್ಲ. ಅವನಿಗೆ ರಾಜ್ಯ ಮುಖ್ಯವಾಗಿರಲಿಲ್ಲ. ಕುಲಗೌರವ ಸಂರಕ್ಷಣೆಯೇ ಮುಖ್ಯವಾಗಿದ್ದಿತು. ಅದಕ್ಕಾಗಿ ಅವನು ರಾವಣನಿಗೆ ತಿಳಿಹೇಳಿದ ಮಾತುಗಳು ಒಂದೇ ಎರಡೇ?!

ಯುದ್ಧವೆಲ್ಲಾ ಮುಗಿದ ಮೇಲೆ ಅಣ್ಣನ ಮರಣಕ್ಕಾಗಿ ವಿಭೀಷಣನು ಬಹಳವಾಗಿ ದುಃಖಿಸುತ್ತಾನೆ. ರಾಮನು ಅವನನ್ನು ತನ್ನ ತಮ್ಮನೆಂದೇ ತಿಳಿದು ಸಮಾಧಾನ ಹೇಳುತ್ತಾನೆ; ವಿಭೀಷಣನಿಗೆ ತತ್‌ಕ್ಷಣದ ಕರ್ತವ್ಯಗಳನ್ನು ನೆನಪಿಸಿಕೊಡುತ್ತಾನೆ. ಅವನ ರಾಜ್ಯಾಭಿಷೇಕವಾದ ಮೇಲೆ, ಸೀತೆಯನ್ನು ಕರೆತರಲು ಹನುಮಂತನನ್ನು ಕೇಳಿಕೊಳ್ಳುತ್ತಾನೆ. ಅಶೋಕವನದಲ್ಲಿ ಸೀತೆಯ ಸುತ್ತ ನೆರೆದು ಅವಳನ್ನು ನಾನಾ ರೀತಿ ಪೀಡಿಸುತ್ತಿದ್ದ ರಾಕ್ಷಸಿಯರನ್ನು ಹಿಂಸಿಸಿ ಕೊಂದುಬಿಡುವೆನೆನ್ನುತ್ತಾನೆ ಹನುಮಂತ. ಆದರೆ ಸೀತೆ, "ಅವರು ಮಾಡಿದ ತಪ್ಪಾದರೂ ಏನು? ರಾಜನನ್ನು ಆಶ್ರಯಿಸಿರುವ ಮುಗ್ಧೆಯರಾದ ಅವರು ರಾಜನ ಆಜ್ಞೆಯಂತೆಯೇ ನಡೆಯಬೇಕಲ್ಲವೆ?" ಎಂದು ಹೇಳಿ ಅವರ ಮೇಲೆ ಕರುಣೆ ತೋರುತ್ತಾಳೆ (*ಯುದ್ಧಕಾಂಡ*. ೧೧೬ . ೩೮).

ಹಾಗೆಯೇ ಧರ್ಮಪರಾಯಣನಾದ ಪತಿ ತನ್ನನ್ನು ಕಠೋರವಾಗಿ ನಡೆಸಿಕೊಂಡಾಗಲೂ, ಧರ್ಮಿಷ್ಠ, ಸತ್ಯಸಂಧ ಆದರ್ಶ ರಾಜನ ಧರ್ಮವನ್ನು ಎತ್ತಿ ಹಿಡಿಯುವುದಕ್ಕಾಗಿ ರಾಮ ಹೀಗೆ ಮಾಡಬೇಕಾಯಿತೆಂದು ಸೀತೆ ಭಾವಿಸುತ್ತಾಳೆ. ರಾಮನಲ್ಲಿ ಯಾವ ದೋಷವನ್ನೂ ಕಾಣುವುದಿಲ್ಲ. ಶ್ರೀಮಾತೆ ಶಾರದಾದೇವಿಯವರ, "ಮಗು, ನೀನು ಶಾಂತಿ ನೆಮ್ಮದಿಗಳನ್ನು ಬಯಸುವೆಯಾದರೆ ಪರರ ದೋಷವನ್ನೆಣಿಸಬೇಡ" ಎಂಬ ಮಾತು ಇಲ್ಲಿ ನೆನಪಾಗುತ್ತದೆ. ಹೀಗೆಂದೇ ಸ್ವಾಮಿ ವಿವೇಕಾನಂದರು, "ಸೀತೆ ಸ್ವಭಾವತಃ ನಿಜವಾದ ಭಾರತೀಯಳು, ಹಿಂಸೆಗೆ ಪ್ರತಿಹಿಂಸೆಯನ್ನು ಅವಳು